ಆ) *ಈ ಜಿಲ್ಲೆಯಲ್ಲಿ ಆಹಾರ ಸಂಸ್ಕರಣೆ ಪಾರ್ಕ್ ಸ್ಥಾಪಿಸಲು ಸರ್ಕಾರವು ಬಯಸಿದೆಯೇ?*

ಇ) *ಈ ಸಂಸ್ಕರಣೆ ಪಾರ್ಕ್ ಸ್ಥಾಪನೆಯಿಂದ ಆ ಭಾಗದ ರೈತರಿಗೆ ಯಾವ ರೀತಿಯ ಅನುಕೂಲಗಳು ಆಗಲಿದೆ?*

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಆ) ಬಿಜಾಪುರ ಜಿಲ್ಲೆಯಲ್ಲಿ ಪ್ರಮುಖವಾಗಿ ದಾಳಿಂಬೆ, ಮಾವು, ನಿಂಬೆ ಮತ್ತು ಬೋರೆ ಹಣ್ಣುಗಳ ಬೆಳೆಗಳನ್ನು ಬೆಳೆಯಲಾಗುತ್ತಿದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿನ ಕೃಷಿ ಕಾಲೇಜುಗಳ ಸ್ಥಾಪನೆ

850 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) *ರಾಜ್ಯದಲ್ಲಿ ಕೃಷಿಗೆ ಪೂರಕವಾದ ಎಷ್ಟು ಕಾಲೇಜುಗಳನ್ನು ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆ?*

ಆ) *ಇವು ಎಂದಿನಿಂದ ಪ್ರಾರಂಭವಾಗಲಿವೆ?*

ಇ) *ಈ ಕಾಲೇಜುಗಳನ್ನು ಯಾವ ಯಾವ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗುವುದು, ಆ ಕಾಲೇಜುಗಳ ವ್ಯಾಪ್ತಿಯೇನು?*

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು) :

ಆ) ಸರ್ಕಾರವು ರಾಜ್ಯ ಪ್ರತಿ ಜಿಲ್ಲೆಯಲ್ಲಿ ಸಂಬಂಧಿಸಿದ ಕೃಷಿ ವಿಶ್ವವಿದ್ಯಾನಿಲಯದ ಹೊಂದುವ ಉದ್ದೇಶವನ್ನು ಇಟ್ಟುಕೊಂಡಿದೆ.

ಆ) ಪರಿಶೀಲನೆಯಲ್ಲಿದೆ.

ಇ) ಪರಿಶೀಲನೆಯಲ್ಲಿದೆ.

ಸಾರಿಗೆ ಸಂಸ್ಥೆಯಲ್ಲಿರುವ ನೌಕರರ ಸಮಸ್ಯೆ

851 - ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) *ಸಾರಿಗೆ ಸಂಸ್ಥೆಯಲ್ಲಿ ಒಟ್ಟು ಎಷ್ಟು ನೌಕರರಿದ್ದಾರೆ?*

ಅ) ಇದರಲ್ಲಿ ಎಷ್ಟು ನೌಕರರಿಗೆ ವಸತಿ ಸೌಲಭ್ಯವಿದೆ?

ಇ) ಉಳಿದ ನೌಕರರಿಗೆ ಇನ್ನು ಎಷ್ಟು ಸಮಯದಲ್ಲಿ ವಸತಿ ಸೌಲಭ್ಯವನ್ನು ಕಲ್ಪಿಸಲಾಗುವುದು?

ಈ) ಇದಕ್ಕಾಗಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು) :

ಅ) 64,261 (ಜನವರಿ 97ರ ಅಂತ್ಯಕ್ಕೆ)

ಆ) 1460 ಉದ್ಯೋಗಿಗಳಿಗೆ ವಸತಿಗೃಹ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಇ) ಎಲ್ಲಾ ನೌಕರರಿಗೆ ವಸತಿ ಸೌಕರ್ಯ ಕಲ್ಪಿಸಲು ಸಾಧ್ಯವಾಗಿರುವುದಿಲ್ಲ. ಆದಾಗ್ಯೂ, ಸಂಸ್ಥೆಯ ಒಡೆತನದಲ್ಲಿರುವ ಜಮೀನಿನಲ್ಲಿ ವಸತಿಗೃಹಗಳನ್ನು ನಿರ್ಮಿಸುವ ಗುರಿಯನ್ನು ಹೊಂದಲಾಗಿದೆ. ಹಾಗೂ ಗೃಹಮಂಡಳಿಯಿಂದ ವಸತಿಗೃಹಗಳನ್ನು ಖರೀದಿಸುವ ಬಗ್ಗೆಯೂ ಪರಿಶೀಲನೆ ಮಾಡಲಾಗುತ್ತಿದೆ. ಇದಲ್ಲದೆ ಪ್ರತೀ ಸಾಲಿನಲ್ಲಿ ಅರ್ಹ ಅರ್ಜಿಗಳನ್ನು ಪರಿಗಣಿಸಿ, ಹೆಚ್.ಡಿ.ಎಫ್.ಸಿ. ಸಂಯೋಗದೊಂದಿಗೆ ಸಬ್ಸಿಡಿ ದರದಲ್ಲಿ ಮನೆ ನಿರ್ಮಾಣ ಖರೀದಿಗಾಗಿ ನೌಕರರಿಗೆ ಮುಂಗಡ ಸಾಲವನ್ನು ನೀಡಲಾಗುತ್ತಿದೆ.ಕಳೆದ ಐದು ವರ್ಷಗಳಲ್ಲಿ ಈ ಕೆಳಕಂಡಂತೆ ಮನೆ ಕಟ್ಟಲೂ.ಕೊಳ್ಳಲು ಸಾಲ ನೀಡಲಾಗಿದೆ.

ವರ್ಷ	ಸಾಲ ನೀಡಲಾದ ಉದ್ಯೋಗಿಗಳ ಸಂಖ್ಯೆ	ಮೊತ್ತ
1991-92	141	1,10,20,000-00
1992-93	108	76,00,000-00
1993-94	188	1,40,51,000-00
1994-95	161	1,70,02,000-00
1995-96	154	1,28,14,000-00
ಒಟ್ಟು	**752**	ರೂ. **6,24,87,000-00**

ಈ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯೇ ಸದರಿ ವಿಷಯದ ಬಗ್ಗೆ ಕ್ರಮ ತೆಗೆದುಕೊಳ್ಳುವುದರಿಂದ ಸರ್ಕಾರದ ಮಟ್ಟದಲ್ಲಿ ಕ್ರಮ ಉದ್ಭವಿಸುವುದಿಲ್ಲ.

ಕೊಡಗು ಜಿಲ್ಲೆಯಲ್ಲಿ ರೈತರಿಗೆ ಜಮೀನು ನೀಡಿಕೆ

853 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಕುಮ್ಕಿ ಜಾಗದಲ್ಲಿ ರೈತರಿಗೆ ಹಕ್ಕು ನೀಡಲು ಸರ್ಕಾರವು ಆಲೋಚನೆ ಮಾಡುತ್ತಿದೆಯೇ?